



ಡಾ. ಎಸ್. ರಾಮಮೂರ್ತಿ

## ವಾರಭವಿಷ್ಯ: 28–2–2019 ರಿಂದ 6–3–2019ರ ವರೆಗೆ




ಉದ್ಯೋಗದಲ್ಲಿ ಮನಃಶಾಂತಿ, ಕ್ರಯ– ವಿಕ್ರಯಗಳಲ್ಲಿ ನೀರಿಕ್ಷೆಯಂತೆ ಲಾಭ. ಪ್ರೀತಿ ಪಾತ್ರರಿಂದ ಸಹಾಯ. ಹಿಂದಿನ ಸಮಸ್ಯೆಗಳಿಗೆ ಪರಿಹಾರ ಲಭಿಸುವುದು. ಸೋದರ ವರ್ಗದವರಿಂದ ಸಲಹೆ. ಭೂಮಿ ವಿಚಾರದಲ್ಲಿ ನ್ಯಾಯ ಪ್ರಾಪ್ತಿಯಾಗುವುದು. ಮಕ್ಕಳ ಅಭಿವೃದ್ಧಿ ಕಂಡು ಬರುವುದು. ನಿರೀಕ್ಷಿತ ಸಂದೇಶಗಳ ಆಗಮನದಿಂದ ಧೈರ್ಯ ಪ್ರಾಪ್ತಿ. ಶುಭ ದಿನ: 4; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಚಂಚಲತೆ. ಮಕ್ಕಳ ವಿಚಾರದಲ್ಲಿ ಬೇಸರ. ಉದ್ಯೋಗದಲ್ಲಿ ತಪ್ಪುಗಳಾಗುವ ಸಾಧ್ಯತೆ. ಲೇವಾದೇವಿಗಳಲ್ಲಿ ಲಾಭದ ಕೊರತೆ. ವಾರದ ಮಧ್ಯಭಾಗದಿಂದ ಪ್ರಗತಿ. ಆತ್ಮಬಲ ಹೆಚ್ಚಾಗುವುದು. ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ. ಗುರು ಹಿರಿಯರೊಂದಿಗೆ ಚರ್ಚೆ, ದೈವೀಕತೆಯಲ್ಲಿ ಆಸಕ್ತಿ. ವಿರೋಧಿಗಳು ಹಿಂದೆ ಸರಿಯುವರು. ಶುಭ ದಿನ: 4; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಸಮಾಧಾನ. ಶ್ರಮವಿಲ್ಲದೆ ಕಾರ್ಯ ಸಾಧನೆ. ಆತ್ಮೀಯರಿಂದ ಮಾರ್ಗದರ್ಶನ. ವಾರದ ಮಧ್ಯಭಾಗದಲ್ಲಿ ಅಶಾಂತಿ. ವಸ್ತುಗಳು ಕೈಯಿಂದ ಜಾರಿ ಬೀಳುವ ಸಂಭವ. ಉದ್ಯೋಗದಲ್ಲಿ ಒತ್ತಡ, ನಿದ್ರಾಹೀನತೆ, ವ್ಯಾಪಾರದಲ್ಲಿ ಹಿನ್ನಡೆ. ವಾಹನಗಳು ದುರಸ್ತಿಗೆ ಬರಬಹುದು. ವಾರಾಂತ್ಯದಲ್ಲಿ ಏಕಾಗ್ರತೆ ಮತ್ತು ಧೈರ್ಯ. ಶುಭ ದಿನ: 1; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

---




ವಾರದ ಮಧ್ಯಭಾಗದವರೆಗೂ ಸುಖಸೌಖ್ಯ. ಶ್ರಮವಿಲ್ಲದೆ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಕ್ರಯ–ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಕುಟುಂಬ ಸದಸ್ಯರಿಂದ ಸಲಹೆ, ಸಹಕಾರ. ತಕರಾರುಗಳಲ್ಲಿ ನ್ಯಾಯ ಪ್ರಾಪ್ತಿ. ವಾರಾಂತ್ಯ ಆಲಸ್ಯ. ಅನಾವಶ್ಯಕ ಖರ್ಚು. ಉದ್ಯೋಗ ವೃತ್ತಿಗಳಲ್ಲಿ ಅಸಮಾಧಾನ. ಆರೋಗ್ಯ ವ್ಯತ್ಯಯ. ಶುಭ ದಿನ: 2; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

---




ಕೆಲಸ ಕಾರ್ಯಗಳು ನಿಗಧಿತ ಸಮಯಕ್ಕೆ ಮುಗಿದು ಮನಃಶಾಂತಿ ಉಂಟಾಗುವುದು. ವ್ಯಾಪಾರ ರಂಗದಲ್ಲಿ ಹೆಚ್ಚಿನ ಲಾಭ ದೊರಕುವುದು. ಶುಭ ಕಾರ್ಯಗಳಲ್ಲಿ ಪ್ರಗತಿ ಲಭಿಸುವುದು. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿರುವುದು. ಗುರುಹಿರಿಯರು ಸಹಾಯ ಮಾಡುವರು. ವಿರೋಧಿಗಳು ತಟಸ್ಥರಾಗುವರು. ಹಿತಸುದ್ದಿ. ಶುಭ ದಿನ: 4; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ವಿಪರೀತ ಶ್ರಮ. ಅಧಿಕ ಖರ್ಚು. ನಿದ್ರಾಹೀನತೆ. ವೃತ್ತಿ ವ್ಯವಹಾರಗಳಲ್ಲಿ ಅಶಾಂತಿ. ವಾಹನಗಳಿಂದ ತೊಂದರೆ. ವಾರದ ಮಧ್ಯ ಭಾಗದಿಂದ ಮನಃಶಾಂತಿ. ಆಪ್ತರಿಂದ ಸಹಕಾರ. ಸೋದರ ವರ್ಗದವರಿಂದ ಸಹಾಯ. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ರಂಗದಲ್ಲಿ ನಿರೀಕ್ಷಿತ ಲಾಭ. ಅಪಾಯದಿಂದ ಪಾರಾಗುವಿಕೆ. ಹಿತಕರ ಸಂದೇಶ. ಶುಭ ದಿನ: 4; ಶಿವ ಮತ್ತು ದುರ್ಗಾ ಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಮನಃಶಾಂತಿ. ಶ್ರಮವಿಲ್ಲದೆ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಆಪ್ತರ ಭೇಟಿ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಆತಂಕ. ಅನಾವಶ್ಯಕ ತಿರುಗಾಟ. ಅಧಿಕಾರ ವರ್ಗದವರ ಭೇಟಿಗೆ ಅಡೆತಡೆ. ಉದ್ಯೋಗದಲ್ಲಿ ಒತ್ತಡ. ವ್ಯಾಪಾರದಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರಾಂತ್ಯ ಅನುಕೂಲ. ಶುಭ ದಿನ: 1; ಗುರು ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

---




ವಾರದ ಮಧ್ಯ ಭಾಗದವರೆಗೂ ಅನುಕೂಲ, ಅಭಿವೃದ್ಧಿ. ಆತ್ಮಬಲ ವೃದ್ಧಿ. ಉದ್ಯೋಗದಲ್ಲಿ ಪ್ರಗತಿ. ಕ್ರಯ ವಿಕ್ರಯಗಳಲ್ಲಿ ಸೂಕ್ತಲಾಭ. ಪ್ರಯಾಣ ಸೌಖ್ಯ. ದೇವತಾ ಕಾರ್ಯ ಯೋಜನೆ. ಮಿತ್ರರಿಂದ ಸಹಾಯ. ವಾರಾಂತ್ಯ ಬೇಸರ. ಅಕಾಲ ಭೋಜನ. ಕಾರ್ಯ ಹಿನ್ನಡೆ. ವಿರೋಧಿಗಳಿಂದ ತೊಂದರೆ. ಅಹಿತ ಸುದ್ದಿ. ಶುಭ ದಿನ: 2; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ

---




ವಾರದ ಮಧ್ಯ ಭಾಗದವರೆಗೂ ಅನುಕೂಲ. ಮನಃಶಾಂತಿ. ಆತ್ಮಬಲವೃದ್ಧಿ. ಉದ್ಯೋಗದಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಹೊಗಳಿಕೆ. ದೇವತಾ ಕಾರ್ಯ ಯೋಜನೆ. ಬರಬೇಕಾದ ಹಣ ಬರುವುದು. ಹಿತ ಸುದ್ದಿ. ವಾರಾಂತ್ಯ ಸೋಮಾರಿತನ. ಭಯ. ಆರೋಗ್ಯ ವ್ಯತ್ಯಯ. ಕೆಲಸ ಕಾರ್ಯಗಳಲ್ಲಿ ಒತ್ತಡ. ನಿದ್ರಾಹೀನತೆ. ಶುಭ ದಿನ: 2; ಗುರು ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಅಧಿಕ ಶ್ರಮ. ಕಾರ್ಯಕಲಾಪಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ಲೇವಾದೇವಿಗಳಲ್ಲಿ ಹಾನಿ. ವಿರೋಧಿಗಳಿಂದ ಒತ್ತಡ. ವಾರದ ಮಧ್ಯ ಭಾಗದಿಂದ ಪ್ರಗತಿ. ಉದ್ಯೋಗದಲ್ಲಿ ಮುನ್ನಡೆ. ತಾಳ್ಮೆ ಹೆಚ್ಚುವುದು. ವ್ಯಾಪಾರದಲ್ಲಿ ಲಾಭ. ಆತ್ಮೀಯರಿಂದ ಸಲಹೆ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಶುಭ ದಿನ: 4; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಸಮಾಧಾನ. ಸೌಖ್ಯ. ಶ್ರಮವಿಲ್ಲದೆ ಕಾರ್ಯ ಸಾಧನೆ. ಲೇವಾದೇವಿಗಳಲ್ಲಿ ಲಾಭ. ಗುರುಹಿರಿಯರಿಂದ ಸನ್ಮಾರ್ಗದ ಮಾಹಿತಿ. ವಾರದ ಮಧ್ಯಭಾಗದಲ್ಲಿ ಆತಂಕ. ಅಹಿತ ಭೋಜನ. ಕೋಪ ತಾಪ. ಸಂದೇಶಗಳ ವಿಳಂಬ. ಉದ್ಯೋಗದಲ್ಲಿ ಅಶಾಂತಿ. ವ್ಯಾಪಾರದಲ್ಲಿ ಹಿನ್ನಡೆ. ಅವಸರದಿಂದ ಪೆಟ್ಟಾಗುವ ಸಾಧ್ಯತೆ. ಶುಭ ದಿನ:1; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ

---




ವಾರದ ಆರಂಭದಲ್ಲಿ ಅಶಾಂತಿ. ಪತಿ ಪತ್ನಿಯರಲ್ಲಿ ಕಲಹ ಸಂಭವ. ಅನಾವಶ್ಯಕ ಖರ್ಚು. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ಸಂದೇಶಗಳ ವಿಳಂಬ. ವಾರದ ಮಧ್ಯಭಾಗದಿಂದ ಪ್ರಗತಿ. ಏಕಾಗ್ರತೆ ಹೆಚ್ಚುವುದು. ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆದು ಸಫಲವಾಗುವುದು. ವ್ಯಾಪಾರ ವಹಿವಾಟುಗಳಲ್ಲಿ ಲಾಭ ವೃದ್ಧಿಯಾಗುವುದು. ಹಿತ ಸಂದೇಶ. ಶುಭ ದಿನ: 4; ಶಿವ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ